# ಈ ಸಲ ಕಪ್ ನಮ್ದು

‘ಮಿಲಿಯನ್ ಡಾಲರ್ ಬೇಬಿ’ ಎಂದೇ ಹೆಸರಾದ ಐಪಿಎಲ್ ಆರಂಭವಾದ ವರ್ಷದಿಂದಲೂ ‘ಈ ಸಲ ಕಪ್ ನಮ್ದೇ’ ಎನ್ನುವ ಘೋಷವಾಕ್ಯ ಆರ್‌ಸಿಬಿ ಅಭಿಮಾನಿಗಳಿಂದ ಮೊಳಗುತ್ತಿತ್ತು. 17 ವರ್ಷಗಳ ನಂತರ ಕಪ್ ಎತ್ತಿ ಹಿಡಿಯುವ ಗಳಿಗೆ ಕೂಡಿಬಂತು.

■ ಪ್ರಮೋದ ಕುಲಕರ್ಣಿ

ಕಳೆದ ವಾರ ಅಹಮದಾಬಾದ್‌ನಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧದ ಐಪಿಎಲ್ ಫೈನಲ್ ಪಂದ್ಯದ ಕೊನೆಯ ಓವರ್‌ನ ಕೊನೆಯ ಎಸೆತದ ಶಾಸ್ತ್ರವನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಬೌಲರ್‌ಗಳು ಮುಗಿಸುತ್ತಿದ್ದಂತೆಯೇ 17 ವರ್ಷಗಳ ಸುದೀರ್ಘ ಕಾಯುವಿಕೆಗೆ ಸಂಭ್ರಮದಿಂದಲೇ ತೆರೆಬಿದ್ದಿತ್ತು.

ಫ್ರಾಂಚೈಸ್ ಆಧರಿತವಾದ ಐಪಿಎಲ್ ಟೂರ್ನಿ ಬಹುತೇಕರಿಗೆ ಉದ್ಯಮವಾಗಿದೆ ಎನ್ನುವುದು ಗುಟ್ಟಾಗಿ ಉಳಿದಿಲ್ಲ. ಪ್ರತಿ ವರ್ಷ ನಡೆಯುವ ಹರಾಜಿನಲ್ಲಿ ಸಿಗುವ ಕೋಟ್ಯಂತರ ರೂಪಾಯಿ ಹಣಕ್ಕಾಗಿ ಬೇರೆ ಬೇರೆ ತಂಡಗಳಿಗೆ ಹೋದ ಆಟಗಾರರೇ ಅಧಿಕವಾಗಿದ್ದಾರೆ. ಆದರೆ ಎಲ್ಲ ಹದಿನೆಂಟು ಆವೃತ್ತಿಗಳಿಂದ ಬೆಂಗಳೂರಿನ ತಂಡದಲ್ಲಿ ಆಡುತ್ತಿರುವ ವಿರಾಟ್ ಕೊಹ್ಲಿ ಪಾಲಿಗೆ ಇದು ಅವಿಸ್ಮರಣೀಯ ಕ್ಷಣ.

ಐಪಿಎಲ್‌ನಲ್ಲಿ 267 ಪಂದ್ಯಗಳನ್ನು ಆಡಿರುವ ಬಲಗೈ ಬ್ಯಾಟ್ಸ್‌ಮನ್ ವಿರಾಟ್ ಪಂದ್ಯ ಗೆದ್ದ ಮರುಕ್ಷಣವೇ ಕ್ರೀಡಾಂಗಣದ ತುಂಬೆಲ್ಲ ಓಡಾಡಿ ಸಂಭ್ರಮಿಸುತ್ತಿದ್ದರು. ತಂಡದ ಸಹ ಆಟಗಾರರ ಅಪ್ಪುಗೆ ಬಯಸುತ್ತಿದ್ದರು.

ಆದರೆ ಚೊಚ್ಚಲ ಟ್ರೋಫಿ ಗೆಲ್ಲುತ್ತಿದ್ದಂತೆಯೇ ಮೈದಾನದಲ್ಲಿ ಆನಂದಬಾಷ್ಪ ಸುರಿಸಿದರು. ನೆಲಕ್ಕೆ ಮಂಡಿಯೂರಿ ಮುತ್ತಿಟ್ಟು ಭಾವುಕರಾಗಿದ್ದರು. ಸಹ ಆಟಗಾರರು ಆ ಖುಷಿಯಲ್ಲಿ ಭಾಗಿಯಾದರು. ಒಂದೇ ತಂಡದ ಪರ ಐಪಿಎಲ್‌ನಲ್ಲಿ ಹೆಚ್ಚು ಪಂದ್ಯಗಳನ್ನು ಆಡಿರುವ ವಿರಾಟ್ ಕೊಹ್ಲಿಗೆ ಟ್ರೋಫಿ ಗೆಲ್ಲುವುದು ಮಹತ್ವದ್ದಾಗಿತ್ತು ಎನ್ನುವುದು ಸಹ ಆಟಗಾರರಿಗೂ ಗೊತ್ತಿತ್ತು. ಹೀಗಾಗಿ ಫೈನಲ್ ಪಂದ್ಯ ಗೆಲ್ಲುತ್ತಿದ್ದಂತೆ ವಿರಾಟ್ ಭಾವುಕರಾದರು. ಬಳಿಕ ತಮ್ಮ ತಂಡದ ಹಳೆಯ ಸ್ನೇಹಿತರಾದ ಎ.ಬಿ. ಡಿವಿಲಿಯರ್ಸ್ ಹಾಗೂ ದೈತ್ಯ ಬ್ಯಾಟಿಂಗ್ ಆಟಕ್ಕೆ ಹೆಸರಾದ ವೆಸ್ಟ್ ಇಂಡೀಸ್‌ನ ಕ್ರಿಸ್‌ಗೇಲ್ ಜೊತೆ ಕ್ಯಾಮೆರಾ ಎದುರು ‘ಈ ಸಲ ಕಪ್ ನಮ್ದು’ ಎಂದು ಅಭಿಮಾನದಿಂದ ಬೀಗಿದರು.

ವಿರಾಟ್ ಕೊಹ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಟೂರ್ನಿಗೆ ಸೀನಿಯರ್ ತಂಡದಲ್ಲಿ ಅವಕಾಶ ಪಡೆಯುವ ಕೆಲವು ತಿಂಗಳು ಮೊದಲೇ ಐಪಿಎಲ್‌ನಲ್ಲಿ ಆಡಿದ್ದರು. ಆಗ ಅವರಿಗೆ 18 ವರ್ಷ ವಯಸ್ಸು. ಇಷ್ಟೇ ವರ್ಷಗಳ ಕಾಯುವಿಕೆ ನಂತರ ಚೊಚ್ಚಲ ಟ್ರೋಫಿ ಎತ್ತಿ ಹಿಡಿಯುವ

